# ಕೃತಿ ಸೆನನ್ ರಾಜ್‌ಕುಮಾರ್ ಕಾಮಿಡಿ ಆಟ



ಮಕ್ಕಳನ್ನು ದತ್ತು ತೆಗೆದುಕೊಳ್ಳುವ ಪ್ರಕ್ರಿಯೆಯನ್ನು ಕೇಳಿರುತ್ತೇವೆ. ಆದರೆ ಮಕ್ಕಳೇ, ತಂದೆ ತಾಯಿಯನ್ನು ದತ್ತು ತೆಗೆದುಕೊಳ್ಳುವ ವಿಚಿತ್ರ ವರ್ತಮಾನವನ್ನು ಕೇಳಿದ್ದೀರಾ? ಇದೂ ಅಂತಿಂಥವರಲ್ಲ, ರಾಜ್‌ಕುಮಾರ್ ರಾವ್ ಅಪ್ಪ, ಅಮ್ಮ ಇಬ್ಬರನ್ನೂ ದತ್ತು ತೆಗೆದುಕೊಳ್ಳುತ್ತಿದ್ದಾರೆ! ಇಷ್ಟೇ ಅಲ್ಲ, ದತ್ತು ತೆಗೆದುಕೊಳ್ಳುತ್ತಿರುವುದು ಯಾವುದೋ ಅನಾಮಿಕರನ್ನಲ್ಲ, ಬಾಲಿವುಡ್ ಹಿರಿಯ ನಟರಾದ ಡಿಂಪಲ್ ಕಪಾಡಿಯಾ ಮತ್ತು ಪರೇಶ್ ರಾವಲ್ ಅವರನ್ನು. ಅವರಿಗೆ ಸಾತ್ ನೀಡುತ್ತಿರುವುದು ಕೃತಿ ಸೆನನ್.

ಏನ್ ತಮಾಷೆ ಮಾಡ್ತಿದ್ದೀರಾ ಅನ್ನಬೇಡಿ. ಅನುಮಾನವೇ ಬೇಡ. ಈ ಪ್ರಸಂಗದಲ್ಲಿ ಸಾಕಷ್ಟು ತಮಾಷೆಗಳು ಇರುತ್ತವೆ. ಈ ದತ್ತು ಪ್ರಕರಣದ ಒಟ್ಟಾರೆ ಉದ್ದೇಶವೇ ನಮ್ಮನ್ನು ಬಿದ್ದು ಬಿದ್ದು ನಗಿಸುವುದು!

ಸಾಕು, ಇನ್ನು ಸುತ್ತಿ ಬಳಸುವುದು ಬೇಡ. ರಾಜ್ ಮತ್ತು ಕೃತಿ, ಡಿಂಪಲ್ ಮತ್ತು ಪರೇಶ್ ಅವರನ್ನು ತಂದೆ ತಾಯಿಯಾಗಿ ದತ್ತು ಪಡೆದುಕೊಳ್ಳುತ್ತಿರುವುದು ನಿಜ. ಹಾ, ನಿಜ ಅಂದರೆ ನಿಜವಲ್ಲ. ತೆರೆಯ ಮೇಲಿನ ನಿಜ. ಈ ಪ್ರಸಂಗ ನಡೆಯುತ್ತಿರುವುದು ರಾಜ್ ಮತ್ತು ಕೃತಿ ಜೊತೆಯಾಗಿ ನಟಿಸುತ್ತಿರುವ ಹೊಸ ಕಾಮಿಡಿ ಸಿನಿಮಾದಲ್ಲಿ.

ಈಗ ಉಸಿರು ತುಸು ನಿರಾಳವಾಯಿತಲ್ಲ. ಬನ್ನಿ, ನೆಮ್ಮದಿಯಿಂದ ಈ ಚಿತ್ರದ ಬಗ್ಗೆ ಇನ್ನೊಂದಿಷ್ಟು ಮಾಹಿತಿ ತಿಳಿದುಕೊಳ್ಳೋಣ. ಇದು ಅಭಿಷೇಕ್ ಜೈನ್ ಅವರು ನಿರ್ದೇಶನ ಮಾಡುತ್ತಿರುವ ಮೊದಲ ಸಿನಿಮಾ. ಈ ಹಿಂದೆ ರಾಮ್ ಮಧ್ವಾನಿ, ಸುಭಾಶ್ ಘಾಯ್, ಸಂಜಯ್ ಲೀಲಾ ಬನ್ಸಾಲಿ ಅವರಂಥ ಘಟಾನುಘಟಿ ನಿರ್ದೇಶಕರ ಬಳಿ ಸಹಾಯಕರಾಗಿ ಕೆಲಸ ಮಾಡಿ ಅನುಭವ ಇರುವ ಅಭಿಷೇಕ್, ತಮ್ಮ ನಿರ್ದೇಶನದ ಮೊದಲ ಸಿನಿಮಾದಲ್ಲಿ ನಗೆಯುಕ್ಕಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ.

ದಿನೇಶ್ ವಿಜನ್ ಅವರ ಮ್ಯಾಡ್‌ಡಾಕ್ ಫಿಲಂಸ್ ಅಡಿಯಲ್ಲಿ ನಿರ್ಮಾಣವಾಗುತ್ತಿರುವ ಈ ಚಿತ್ರದ ಚಿತ್ರಕಥೆಯನ್ನು ಕೇಳುವ ಮೊದಲೇ ರಾಜ್‌ಕುಮಾರ್ ರಾವ್ ಮತ್ತು ಕೃತಿ ಚಿತ್ರಕ್ಕೆ ಸಹಿ ಹಾಕಿಬಿಟ್ಟಿದ್ದಾರಂತೆ. ಇದನ್ನು ಸ್ವತಃ ದಿನೇಶ್ ಅವರೇ ಹೇಳಿಕೊಂಡಿದ್ದಾರೆ.

ಈ ಹಿಂದೆ ದಿನೇಶ್, ರಾಜ್ ಮತ್ತು ಕೃತಿ ಮುಖ್ಯಭೂಮಿಕೆಯಲ್ಲಿರುವ ಒಂದು ಚಿತ್ರವನ್ನು ನಿರ್ಮಾಣ ಮಾಡುತ್ತಿರುವುದಾಗಿ ಸುದ್ದಿಯಾಗಿತ್ತು. ಆದರೆ ಆ ಚಿತ್ರ ಅರ್ಧಕ್ಕೇ ನಿಂತು ಹೋಗಿತ್ತು. ಅದೇ ಕಾರಣಕ್ಕೆ ಅವರಿಬ್ಬರನ್ನೂ ಇಟ್ಟುಕೊಂಡು ಮತ್ತೊಂದು ಸಿನಿಮಾ ನಿರ್ಮಾಣಕ್ಕೆ ದಿನೇಶ್ ಮುಂದಾಗಿದ್ದಾರೆ. ಒನ್‌ಲೈನ್ ಕೇಳಿಯೇ ಇಷ್ಟಪಟ್ಟ ರಾಜ್‌ಕುಮಾರ್ ಮತ್ತು ಕೃತಿ ತಕ್ಷಣವೇ ಈ ಚಿತ್ರಕ್ಕೆ ಅಂಕಿತ ಒತ್ತಿದ್ದಾರಂತೆ.

'ಇದೊಂದು ಅನಾಥ ಗಂಡ ಹೆಂಡತಿಯ ಕಥೆ. ಗಂಡ, ತಂದೆ ತಾಯಿಯನ್ನು ದತ್ತು ತೆಗೆದುಕೊಳ್ಳಲು ಮುಂದಾಗುತ್ತಾನೆ. ಈ ನಿರ್ಧಾರ ಅವನ ಬದುಕನ್ನೇ ಚಿಂದಿ ಮಾಡುವಷ್ಟು ರಾದ್ಧಾಂತವಾಗಿಬಿಡುತ್ತದೆ. ಇದು ನಿಜಬದುಕಿನಿಂದಲೇ ಸ್ಫೂರ್ತಿ ಪಡೆದಿರುವ ಕಥೆ. ಸಾಕಷ್ಟು ಕಾಮಿಡಿ ಸಂಗತಿಗಳನ್ನು ಸೇರಿಸಿಕೊಂಡು ಸಿನಿಮಾ ಮಾಡುತ್ತಿದ್ದೇವೆ' ಎಂದು ಸಿನಿಮಾದ ಕುರಿತು ಪತ್ರಿಕೆಯೊಂದಕ್ಕೆ ದಿನೇಶ್ ವಿವರಣೆ ನೀಡಿದ್ದಾರೆ. ರಾಜ್‌ಕುಮಾರ್ ಮತ್ತು ಕೃತಿ ಅವರ ಕಾಮಿಡಿ ಟೈಮಿಂಗ್ಸ್ ಬಗ್ಗೆಯೂ ಅವರು ಮೆಚ್ಚುಗೆಯ ಮಾತುಗಳನ್ನಾಡಿದ್ದಾರೆ.

ಮಾರ್ಚ್ ತಿಂಗಳ ಮಧ್ಯಭಾಗದಲ್ಲಿ ಚಿತ್ರೀಕರಣ ಆರಂಭಗೊಳ್ಳಲಿದ್ದು, ವರ್ಷಾಂತ್ಯಕ್ಕೆ ದತ್ತು ತಂದೆ ತಾಯಿಯರ ಜೊತೆಯಲ್ಲಿ ರಾಜ್‌ಕುಮಾರ್ ರಾವ್ ತೆರೆಯ ಮೇಲೆ ಲಗ್ಗೆ ಇಡಲಿದ್ದಾರೆ.



■ ಮಾಂಟೊ